ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-3 (ಅರವಿಂದ)

ದಿನಾಂಕ: 23-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಬಿ.ಎಚ್.ಎನ್. ಪ್ರತಿವಾದಿ 4, 5ಎ, 5ಬಿ ಮತ್ತು 6 ರವರ ಪರ ವಕೀಲರಿಂದಃ</u>**

ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈ ದಾವೆಯಲ್ಲಿ 03 ಆಸ್ತಿಗಳಿವೆ. ದಾವಾ ಆಸ್ತಿಗಳ ಸರ್ವೆ ನಂ.100/2/2 ಹಾಗೂ 100/2/5 ಇರುತ್ತವೆ. ಸರ್ವೆ ನಂ.100/2/2ರ ಚಕ್ಕಬಂದಿ ಪೂರ್ವಕ್ಕೆ- ಬೀರಪ್ಪ ಮಾವಿನಗಿಡದ ಇವರ ಜಮೀನು, ಪಶ್ಚಿಮಕ್ಕೆ-ಹಣಮಂತ ಮಾವಿನಗಿಡದ ಇವರ ಜಮೀನು, ಉತ್ತರಕ್ಕೆ- 1ನೇ ಪ್ರತಿವಾದಿಯ ಹೊಲ, ದಕ್ಷಿಣಕ್ಕೆ- ಹಳ್ಳ. ಸರ್ವೆ ನಂ.100/2/5 ರ ಚಕ್ಕಬಂದಿ ಪೂರ್ವಕ್ಕೆ- ಹಣಮಂತ ಮಾವಿನಗಿಡದ ಇವರ ಜಮೀನು, ಪಶಿಮಕ್ಕೆ- ಬೀರಪ್ಪ ಮಾವಿನಗಿಡದ ಇವರ ಜಮೀನು, ಉತ್ತರಕ್ಕೆ- 1ನೇ ಪ್ರತಿವಾದಿಯ ಹೊಲ, ದಕ್ಷಿಣಕ್ಕೆ- ಹಳ್ಳ.

2. ಸರ್ವೆ ನಂ.100/2/2 ಮತ್ತು 100/2/5ರ ಮೂಲ ಸರ್ವೆ ನಂಬರ ಹಾಗೂ ಕ್ಷೇತ್ರ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಸ್ವಂತ ಖಂಡ್ರಟ್ಟಿ, ಕಳೆದ 20-25 ವರ್ಷಗಳಿಂದ ಹೊಲ ಮಾಡಿಕೊಂಡು ಕಳ್ಳಿಗುದ್ದಿಯಲ್ಲಿ ವಾಸ ಇದ್ದೇವೆ. 1ನೇಪ್ರತಿವಾದಿಗೆ ಸೇರಿದ ಸರ್ವೆ ನಂ.100/2/2ರ ಜಮೀನನ್ನು ನಾನು ಮಾಡುತ್ತೇನೆ. 1ನೇ ಪ್ರತಿವಾದಿಗೆ ಸೇರಿದ ಜಮೀನನ್ನು ನಾನು ಸಾಗುವಳಿ ಮಾಡುತ್ತೇನೆಂದು ತೋರಿಸಲು 1ನೇ ಪ್ರತಿವಾದಿಯಿಂದ ಯಾವುದೇ ದಾಖಲೆ ಮಾಡಿಕೊಂಡಿಲ್ಲ. 1ನೇ ಪ್ರತಿವಾದಿಗೆ ಸರ್ವೆ ನಂ.100/2/2 ಮತ್ತು 100/2/5

ಈ ಜಮೀನುಗಳನ್ನು ಹೊರತುಪಡಿಸಿ ಬೇರೆ ಎಷ್ಟು ಜಮೀನುಗಳು ಇವೆ ಎಂದು ನನಗೆ ಗೊತ್ತಿಲ್ಲ.

3. ನಾನು ಈಗ ಕಳ್ಳಿಗುದ್ದಿಯಲ್ಲಿ ವಾಸ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನು 2016ರಲ್ಲಿ ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಬರೆಯಿಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಓದಿ ಅದರಲ್ಲಿ ಹೇಳಿರುವ ವಿಷಯ ತಿಳಿದುಕೊಂಡು ಸಲ್ಲಿಸಿದ್ದೇನೆ ಎಂದರೆ ಸರಿ.

4.1ನೇ ಪ್ರತಿವಾದಿ ಗೋಕಾಕನಲ್ಲಿ ವಾಸ ಇದ್ದಾರೆ. ಅವರು ವಾಸ ಇದ್ದ ಮನೆ ನಂಬರ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಜೊತೆ ಅವರ ಕುಟುಂಬದವರು ಸಹ ಕೂಡಿ ಇರುತ್ತಾರೆ ಎಂದರೆ ಸರಿಯಲ್ಲ. ವಾದಿ ಸುಮಾರು 05-06 ವರ್ಷದಿಂದ ಸೌದಿ ಅರೆಬಿಯಾದಲ್ಲಿ ವಾಸ ಇದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾಸ ಸೌದಿ ಅರೆಬಿಯಾದಲ್ಲಿ ಇರುತ್ತಾರೆ ಹಾಗೂ ಪ್ರತಿವಾದಿ 1 ರಿಂದ 3 ಗೋಕಾಕನಲ್ಲಿ ಇರುತ್ತಾರೆ ಎಂದು ಬರೆಯಿಸಿಲ್ಲ.

5. 1ನೇ ಪ್ರತಿವಾದಿಗೆ ಸರ್ವೆ ನಂ.100/2/2 ಹಾಗೂ 100/2/5ರ ಆಸ್ತಿ ಅವರ ಹಿರಿಯರಿಂದ ಬಂದಿದೆ. ನಾನು ಸದರಿ ಆಸ್ತಿಗಳ ಉತಾರ ನೋಡಿ ಸದರಿ ಆಸ್ತಿಗಳು ಅವರ ಹಿರಿಯರಿಂದ ಬಂದಿವೆ ಎಂದು ಹೇಳುತ್ತಿದ್ದೇನೆ. 2012-13ನೇ ಸಾಲಿನಲ್ಲಿ ಸದರಿ ಜಮೀನುಗಳ ಉತಾರದಲ್ಲಿ 1ನೇ ಪ್ರತಿವಾದಿಯ ಹೆಸರು ಇತ್ತು.

ಉತಾರವನ್ನು ಹೊರತುಪಡಿಸಿ ನಾನು ಬೇರೆ ದಾಖಲೆ ನೋಡಿಲ್ಲ. ನಾನು ವಾದಿಗೆ ಅವರ ತಂದೆ 1ನೇ ಪ್ರತಿವಾದಿಗೆ ಎಷ್ಟು ಜಮೀನುಗಳಿವೆ ಎಂದು ಕೇಳಿಲ್ಲ.

6. ಚಿಕ್ಕನಂದಿಯಲ್ಲಿ 1ನೇ ಪ್ರತಿವಾದಿಗೆ ಹಾಗೂ ಅವರ ಮಗ 3ನೇ ಪ್ರತಿವಾದಿ ಜಮೀನುಗಳನ್ನು ಖರೀದಿ ಮಾಡಿದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಚಿಕ್ಕನಂದಿ, ಕಳ್ಳಿಗುದ್ದಿ ಮತ್ತು ಗೋಕಾಕನಲ್ಲಿರುವ ಮನೆಗಳ ಬಗ್ಗೆ ಬರೆಯಿಸಿಲ್ಲ. 1ನೇ ಪ್ರತಿವಾದಿಗೆ 03 ಆಸ್ತಿಗಳು ಇದ್ದವು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿ.

7. 1ನೇ ಪ್ರತಿವಾದಿ ಗೋಕಾಕಿನ ನ್ಯೂ ಇಂಗ್ಲೀಷ ಸ್ಕೂಲ್ ಗೋಕಾಕನಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. 1ನೇ ಪ್ರತಿವಾದಿ ಯಾವ ವರ್ಷದಲ್ಲಿ ಶಿಕ್ಷಕರು ಎಂದು ನೇಮಕಗೊಂಡಿದ್ದರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಗೆ ಎಷ್ಟು ಸಂಬಳ ಇತ್ತು ಎಂದು ದಾಖಲೆಗಳನ್ನು ನಾನು ನೋಡಿಲ್ಲ. ಗೋಕಾಕನಲ್ಲಿರುವ 1ನೇ ಪ್ರತಿವಾದಿಯ ಮನೆಗೆ ನಾನು ಹೋಗಿಲ್ಲ. ಕಳೆದ 3-4 ವರ್ಷಗಳಿಂದ ನನಗು ಹಾಗೂ 1ನೇ ಪ್ರತಿವಾದಿಗು ಸಂಬಂಧ ಸರಿ ಇರುವುದಿಲ್ಲ ಅದಕ್ಕಿಂತ ಮೊದಲು ನಮ್ಮ ಸಂಬಂಧ ಚೆನ್ನಾಗಿತ್ತು.

8. ವಾದಿ ಬಿ.ಎಸ್.ಸಿ ಪದವಿದರರಿರುತ್ತಾರೆ ಮತ್ತು ಅಮೋಘ ಬಿ.ಇ ಪದವಿದರರಿರುತ್ತಾರೆ. ವಾದಿ ಯಾವ ಕಾಲೇಜಿನಲ್ಲಿ ತಮ್ಮ ಶಿಕ್ಷಣ ಮುಗಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1ನೇ ವಾದಿಗೆ ಅವರ ತಂದೆಯಾದ 1ನೇ ಪ್ರತಿವಾದಿಯೇ

ಕಲಿಸಿರುತ್ತಾರೆ. 1ನೇ ಪ್ರತಿವಾದಿ, ಅವರ ಹೆಂಡತಿ ಮತ್ತು ಮಕ್ಕಳು ವಿದ್ಯಾವಂತರು ಮತ್ತು ತಿಳುವಳಿಕೆ ಇದ್ದವರು ಇದ್ದಾರೆ ಎಂದರೆ ಸರಿ. ಸದರಿಯವರಿಗೆ ವ್ಯವಹಾರಗಳ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ.

9. 1ನೇ ಪ್ರತಿವಾದಿ ಗೋಕಾಕನಲ್ಲಿ ಖುಲ್ಲಾ ಜಾಗಾ ಖರೀದಿ ಮಾಡಿ ಕಟ್ಟಡ ಕಟ್ಟಿಸಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಖುಲ್ಲಾ ಜಾಗಾದಲ್ಲಿ ಮನೆ ಕಟ್ಟಲು ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮನೆ ಕಟ್ಟಲು 1ನೇ ಪ್ರತಿವಾದಿ ಹೇಗೆ ಹಣ ಸಂಗ್ರಹಿಸಿದ್ದರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮನೆ ಕಟ್ಟಲು ಸಾಲ ಮಾಡಿದ್ದು, ಸದರಿ ಸಾಲ ತೀರಿಸಲು ಸವೆ ನಂ.100/2/2 ಮತ್ತು 100/2/5ರ ಸಂಪೂರ್ಣ ಜಮೀನನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮನೆ ಕಟ್ಟಿಸಲು ಸಾಕಷ್ಟು ಹಣ ಹೊಂದಿಸಿ ಇಟ್ಟಿದ್ದರು ಎಂದು ಹೇಳಲು ನಾನು ದಾಖಲೆಗಳನ್ನು ನೋಡಿಲ್ಲ. 1ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನಾನು ಯಾವುದೇ ಹಿರಿತನ ಮಾಡಿಲ್ಲ. 1ನೇ ಪ್ರತಿವಾದಿ ತಮ್ಮ ಮನೆತನದ ಅಡಚಣೆಗಾಗಿ ಸರ್ವೆ ನಂ.100/2/2 ಮತ್ತು 100/2/5 ಜಮೀನುಗಳನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಸರ್ವೆ ನಂ.100/2/2 ಮತ್ತು 100/2/5 ಈ ಜಮೀನುಗಳನ್ನು ಪ್ರತಿವಾದಿ 4 ಮತ್ತು 5 ರವರು ಖರೀದಿ ಮಾಡಿದಾಗಿನಿಂದ ಸದರಿಯವರೇ ಆ ಜಮೀನಿನಲ್ಲಿ ಕಬ್ಜೆಯಲ್ಲಿ ಇದ್ದು ಮನೆ ಕಟ್ಟಿಕೊಂಡು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬೆಳೆದ ಕಬ್ಬನ್ನು ಪ್ರತಿ ವರ್ಷ ಪ್ರತಿವಾದಿ 4 ಮತ್ತು 5 ರವರೇ ತಮ್ಮ ಹೆಸರಿನಲ್ಲಿ ಸಕ್ಕರೆ ಕಾರಖಾನೆಗೆ ಕಳುಹಿಸುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈ ಹೊತ್ತಿಗೂ ವಾದಿಯೇ ಕಬ್ಜೆಯಲ್ಲಿ ಇದ್ದಾರೆ ಎಂದು ಹೇಳಲು ನನ್ನ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.100/2/2 ಮತ್ತು 100/2/5 ಜಮೀನುಗಳಲ್ಲಿ ವಾದಿ ಕಬ್ಜೆಯಲ್ಲಿ ಇದ್ದಾರೆ ಎಂದು ತೋರಿಸಲು ಉತಾರಗಳು ಇರುತ್ತವೆ. ಸದರಿ ಜಮೀನುಗಳನ್ನು ಖರೀದಿ ಮಾಡಿದಾಗಿನಿಂದ ಉತಾರಗಳಲ್ಲಿ ಪ್ರತಿವಾ 4 ರಿಂದ 6 ರವರ ಹೆಸರು ದಾಖಲ ಇವೆ ಎಂದರೆ ಸರಿ.

11. ನಿಪಿ-2 1ನೇ ಪ್ರತಿವಾದಿ 4 ಮತ್ತು 5ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರ ಎಂದರೆ ಸರಿ. ಆದರೆ ಅದು ಖೊಟ್ಟಿ ಖರೀದಿ ಪತ್ರ ಇರುತ್ತದೆ. ನನಗೆ ಎಲ್ಲ ನಿಜ ವಿಷಯ ಗೊತ್ತಿದ್ದರೂ ಸಹ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಸಹಾಯ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಆಸ್ತಿಗಳ ಬೆಲೆ ಹೆಚ್ಚಾಗಿದ್ದರಿಂದ ಏನಾದರೂ ಮಾಡಿ 1ನೇ ಪ್ರತಿವಾದಿ 4 ಮತ್ತು 5ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನುಗಳನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ನನ್ನ ಕಡೆಯಿಂದ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಗೋಕಾಕನಲ್ಲಿವ

ಮನೆಯಲ್ಲಿ ವಾದಿ ಮತ್ತು ಪ್ರತಿವಾದಿ 1 ರಿಂದ 3 ಕೂಡಿ ಇರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ಸರ್ವೆ ನಂ.100/2/2 ಮತ್ತು 100/2/5 ಈ ಜಮೀನುಗಳನ್ನು 1ನೇ ಪ್ರತಿವಾದಿ ನನಗೆ ಉಳುಮೆ ಮಾಡಲು ಹಚ್ಚಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಗೋವಿನ ಜೋಳ, ಸದಕ, ಹತ್ತಿ, ಗೋದಿ ಬೆಳೆಯುತ್ತೇನೆ. ಸ್ಥಳೀಯ ಖರೀದಿದಾರರೇ ನಮ್ಮ ಬಳಿ ಬಂದಿರುತ್ತಾರೆ ಆದ್ದರಿಂದ ನಾವು ಬೆಳೆದ ಬೆಳೆಗಳನ್ನು ಎ.ಪಿ.ಎಂ.ಸಿ ಗೆ ತೆಗೆದುಕೊಂಡು ಹೋಗುವುದಿಲ್ಲ. ಬೆಳೆ ಖರೀದಿ ಮಾಡಲು ಬರುವವರ ಹೆಸರು ನನಗೆ ಗೊತ್ತಿಲ್ಲ. ಖರೀದಿದಾರರೇ ಜಮೀನಿಗೆ ಬಂದು ನಾವು ಬೆಳೆದ ಬೆಳೆಯನ್ನು ಖರೀದಿ ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಸರ್ವೆ ನಂ.100/2/2 ಮತ್ತು  100/2/5ರಲ್ಲಿ ಗೋವಿನ ಜೋಳ, ಸದಕ, ಹತ್ತಿ, ಗೋದಿ ಬೆಳೆಯುತ್ತೇನೆ ಹಾಗೂ ಸದರಿ ಬೆಳೆಯನ್ನು ಖರೀದಿದಾರರೇ ಜಮೀನಿಗೆ ಬಂದು ಖರೀದಿ ಮಾಡಿಕೊಂಡು ಹೋಗುತ್ತಾರೆ ಎಂದು ಬರೆಯಿಸಿಲ್ಲ.

13. ವಾದಿ ಸರ್ವೆ ನಂ.100/2/2 ಮತ್ತು  100/2/5ರ ಜಮೀನುಗಳನ್ನು ಉಳುಮೆ ಮಾಡಲು ನನಗೆ ಹಚ್ಚಿರುತ್ತಾರೆ ಎಂದು ವಾದ ಪತ್ರದಲ್ಲಿ ಬರೆಯಿಸಿಲ್ಲ. ನಾನು ಸದರಿ ಜಮೀನುಗಳನ್ನು ಉಳುವೆ ಮಾಡುತ್ತಿರುವ ವಿಷಯ ವಾದ ಪತ್ರದಲ್ಲಿ ಏಕೆ ಬರೆಯಿಸಿಲ್ಲ ಎಂದು ವಾದಿಯನ್ನು ನಾನು ಕೇಳಿಲ್ಲ.

ಓ.ಎಸ್. ನಂಃ 221/2016
ಪಿ.ಡಬ್ಲ್ಯೂ-3 (ಅರವಿಂದ)

14. ಅಮರ ಪರವಾಗಿ ಸಾಕ್ಷಿ ನುಡಿಯಲು ಹಣಮಂತ ಬಂದಿದ್ದರು. 1ನೇ ಪ್ರತಿವಾದಿ ಸರ್ವೆ ನಂ.100/2/2 ಮತ್ತು 100/2/5 ರ ಜಮೀನುಗಳನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿರುವ ವಿಷಯ ಹಾಗೂ ಸದರಿ ಜಮೀನುಗಳಲ್ಲಿ 4 ಮತ್ತು 5ನೇ ಪ್ರತಿವಾದಿಯರೇ ಕಬ್ಜೆಯಲ್ಲಿ ಇದ್ದಾರೆ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ